ಖಂಡಿತ ಇನ್ನೊಬ್ಬ ಮದರ್ ತೆರೇಸಾ ಆಗಬಹುದಾಗಿದ್ದವಳು. ಆದರೆ ಬದುಕಿನ ವಿಚಿತ್ರ ತಿರುವುಗಳು ಅವಳನ್ನು ಜಗತ್ತಿನ ಅವಿಸ್ಮರಣೀಯ ಗೂಢಚಾರಿಣಿಯಾಗಿಸಿದವು. ಆದರೆ ವಿಪರ್ಯಾಸವೆಂದರೆ ಕೊನೆಯ ಗಳಿಗೆಯ ವರೆಗೂ ಅವಳ ಮನಸ್ಸು, ಅವಳ ಆತ್ಮ ಹಾತೊರೆಯುತ್ತಿದ್ದುದು ಬುದ್ಧನಿಗಾಗಿ, ವೀಣೆಗಾಗಿ, ಸುಂದರವಾದ ಪ್ರಕೃತಿಗಾಗಿ. ಈ ಎಲ್ಲವುಗಳ ಜೊತೆಗಿನ ಮನುಷ್ಯ ಮನುಷ್ಯರ ಸಹಬಾಳ್ವೆಗಾಗಿ. ಬದುಕಿನ ಗತಿ ಅವಳನ್ನು ಅಹಿಂಸೆಯಿಂದ ಹಿಂಸೆಯ ಕಡೆಗೆ ಕರೆದದ್ದು. ಆದರೆ ಅಂಥ ಉರಿಹಿಂಸೆಯಲ್ಲೂ ಬದುಕಿನುದ್ದಕ್ಕೂ ಅವಳು ಎತ್ತಿ ಹಿಡಿದಿದ್ದು, ಜಪಿಸಿದ್ದು ಶಾಂತಿ ಮಂತ್ರವನ್ನು.

ಕೃತಿಯ ಬಂಧ ಮತ್ತು ಭಾಷೆಯ ಬಗೆಗೆ ಕೆಲವು ಮಾತುಗಳನ್ನು ಹೇಳಲೇಬೇಕು. ಚಂದ್ರಶೇಖರ್ ಮಂಡೆಕೋಲು ಅವರು ಇದನ್ನು ಇತಿಹಾಸದ ವಿದ್ಯಾರ್ಥಿಯಾಗಿ ರಚಿಸಿಲ್ಲ. ಸಮಕಾಲೀನ ಜಗತ್ತು ಹಿಂಸೆಯ ಮೂಲಭೂತವಾದದ ಸರ್ವನಾಶದ ಕಡೆಗೆ ಧಾವಿಸುತ್ತಿರುವಾಗ, ಅದರ ಎದುರು ನಾವೆಲ್ಲರೂ ಅಸಹಾಯಕರೇನೋ ಎಂದು ಕಂಗಾಲಾಗಿರುವಾಗ ಇತಿಹಾಸದ ಪಾಠಗಳನ್ನು ವರ್ತಮಾನದ ನಾಯಕಮಣಿಗಳಿಗೆ ಕಲಿಸುವ ಮೊದಲನೆಯ ಪಾಠದಂತೆ ಇದು ಭಾಸವಾಗುತ್ತಿದೆ. ಸ್ವಾತಂತ್ರ್ಯದ ಹೋರಾಟವೆನ್ನುವುದು ನನ್ನ ಮತ್ತು ಜಗತ್ತಿನ ಜವಾಬ್ದಾರಿಯನ್ನು ಏಕಕಾಲಕ್ಕೆ ಹೊರುವುದು ಎಂದು. ಬದುಕುವುದು ಎನ್ನುವುದು ಇತರರನ್ನು ಕೊಲ್ಲುವುದು ಎನ್ನುವುದಾದರೆ, ಗೆಲುವು ಎನ್ನುವುದು ಮನುಷ್ಯತ್ವದ ಗೋರಿಯ ಮೇಲೆ ಎನ್ನುವುದುದಾದರೆ ಅದಕ್ಕೆ ಯಾವ ಅರ್ಥವೂ ಇಲ್ಲ.

ಚಂದ್ರಶೇಖರ್ ಅವರು ಈ ಇಡೀ ಕೃತಿಯನ್ನು ನೂರ್ ಇನಾಯತ್ ಖಾನ್‌ಳನ್ನು ಪರಿಚಯಿಸುವ ನೆಲೆಯಲ್ಲಿ ಮಾತ್ರವಲ್ಲದೇ ಕಾಲದ ಕಥನವಾಗಿಸುವುದರಲ್ಲಿಯೂ ಯಶಸ್ವಿಯಾಗಿಸಿದ್ದಾರೆ. ಕವಿಯ, ಇತಿಹಾಸಕಾರರ, ಸಮಾಜ ವಿಜ್ಞಾನಿಯ, ರಾಜಕೀಯ ವಿಶ್ಲೇಷಕನ ಅವತಾರಗಳು ಒಂದೆಡೆ ಸೇರಿಕೊಂಡಿರುವುದಕ್ಕೆ ಸಾಕ್ಷಿಯಂತಿದೆ ಈ ಕೃತಿ. ಕೊನೆಗೂ ಪತ್ರಕರ್ತನೊಬ್ಬನಿಗೆ ಇರಬೇಕಾದ ಸಮುದಾಯ ಬದ್ಧತೆಯನ್ನೂ ಈ ಕೃತಿ ಎತ್ತಿ ಹಿಡಿಯುತ್ತದೆ.

ಈ ಕೃತಿಯ ಶೀರ್ಷಿಕೆಯ ಬಗ್ಗೆ ಒಂದು ಮಾತು. ಆರ್ದ್ರ ಕಾವ್ಯ ಎನ್ನುವುದರ ಬದಲು ಕಾವ್ಯ ಎಂದಿದ್ದರೆ ಸಾಕಿತ್ತು. ಆರ್ದ್ರವಲ್ಲದ್ದು ಕಾವ್ಯವಾದೀತು ಹೇಗೆ? ಕಾವ್ಯವಲ್ಲದ್ದು ಕಾವ್ಯದ ಹೆಸರಿನಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಬರುತ್ತಿರುವುದು ಈ ಶೀರ್ಷಿಕೆಗೆ ಸಮರ್ಥನೆಯಾಗಲಾರದು. ನಿಜ, ನೂರಳ ಬದುಕು, ವ್ಯಕ್ತಿತ್ವ ಆರ್ದ್ರವಾದುದು. ಆದರೆ ಆರ್ದ್ರತೆಯಲ್ಲಿ ಅದು ಎಂದೂ ದುರ್ಬಲವಾಗಲಿಲ್ಲ.

**ಎಂ.ಎಸ್. ಆಶಾದೇವಿ**

ವಿಮರ್ಶಕಿ, ಅನುವಾದಕಿ ಎಂ.ಎಸ್. ಆಶಾದೇವಿ ವೃತ್ತಿಯಲ್ಲಿ ಅಧ್ಯಾಪಕರು. 'ಸ್ತ್ರೀಮತವನುತ್ತರಿಸಲಾಗದೆ?', 'ನಾರಿಕೇಳಾ', 'ಬೆಳಕಿಗಿಂತ ಬೆಳ್ಳಗೆ' ಅವರ ಕೆಲವು ಕೃತಿಗಳು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.